# ಉಷಾ ನವರತ್ನರಾಮ್ ಅವರ ಕಾದಂಬರಿಗಳಲ್ಲಿ ವೈದ್ಯಲೋಕ

**ಚಂದನಾ ಕೆ.ಎಸ್.**

ಕನ್ನಡ ಉಪನ್ಯಾಸಕರು, ಶ್ರೀ ಮಹಾವೀರ ಕಾಲೇಜು, ಕೊಡಂಗಲ್ಲು ಅಂಚೆ, ಮೂಡಬಿದಿರೆ, ದ.ಕ.ಜಿಲ್ಲೆ.

**DOI: https://doi.org/10.5281/zenodo.18776115**

## ABSTRACT:

ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಕಾಲದಿಂದಲೂ ಮಹಿಳಾ ಸಾಹಿತಿಗಳು, ಬರಹಗಾರ್ತಿಯರು ಸಮಾಜದ ಅನೇಕ ವೈವಿಧ್ಯಮಯ ಆಯಾಮಗಳನ್ನು ತಮ್ಮ ಬರಹಗಳ ಮೂಲಕ ಚಿತ್ರಿಸಿದ್ದಾರೆ. ಹಾಗೆಯೇ ಹೊಸಗನ್ನಡ ಕಾಲಘಟ್ಟದಲ್ಲಿಯೂ ಮಹಿಳೆಯರು ಅನೇಕ ಕಥೆ, ಕಾದಂಬರಿ, ಕವನ, ಸಂಶೋಧನೆ, ವಿಮರ್ಶೆ, ಪ್ರವಾಸ ಕಥನ ಮುಂತಾದ ಅನೇಕ ಪ್ರಕಾರಗಳಲ್ಲಿ ತಮ್ಮ ಬರಹಗಳನ್ನು ಬರೆದಿದ್ದಾರೆ. 1970ರ ನಂತರ ಮಹಿಳಾ ಸಾಹಿತ್ಯದ ಕಾಲಘಟ್ಟವೆಂದೇ ಹೆಸರಾದ ಕನ್ನಡ ಸಾಹಿತ್ಯದ ಒಂದು ಕವಲಿನಲ್ಲಿ, ಅನೇಕ ಹೆಣ್ಣು ಮಕ್ಕಳು ತಮ್ಮ ಜೀವನದ ಅನುಭವಗಳನ್ನು, ಸಾಮಾಜಿಕ ಸಮಸ್ಯೆಗಳನ್ನು ಮತ್ತು ಅವುಗಳಿಗೆ ಇರುವ ಪರಿಹಾರಗಳನ್ನು ಕತೆ-ಕಾದಂಬರಿಗಳ ರೂಪದಲ್ಲಿ ಬರೆಯಲಾರಂಭಿಸಿದರು.

ಕೆಲವು ಬರಹಗಾರ್ತಿಯರು ಪ್ರೀತಿ-ಪ್ರೇಮ ಇತ್ಯಾದಿ ಒಂದೇ ವಿಷಯಕ್ಕೆ ಸಂಬಂಧಿಸಿದ ಏಕತಾನತೆಯ ವಿಷಯಗಳನ್ನು ಬರೆಯಲಾರಂಭಿಸಿದರೆ, ಹಲವರು ತಮ್ಮ ಕಾದಂಬರಿಗಳ ಹರಹನ್ನು ವಸ್ತುವಿನ ಹಿನ್ನೆಲೆಯಲ್ಲಿ ವಿಸ್ತರಿಸುತ್ತಾ ಸಾಗಿದರು. ಡಾ. ಅನುಪಮಾ ನಿರಂಜನ, ಎಂ.ಕೆ. ಇಂದಿರಾ, ತ್ರಿವೇಣಿ, ಉಷಾ ನವರತ್ನರಾಮ್ ಮುಂತಾದವರು ಹೀಗೆ ವೈವಿಧ್ಯಮಯ ವಿಷಯಗಳಿಗೆ ಸಂಬಂಧಿಸಿದ ಕಾದಂಬರಿಗಳನ್ನು ಬರೆದರು.

ಉಷಾ ನವರತ್ನರಾಮ್ ಅವರನ್ನು ವಿಮರ್ಶಕರು ಜನಪ್ರಿಯ ಕಾದಂಬರಿಗಾರ್ತಿಯರ ಸಾಲಿಗೆ ಸೇರಿಸಿದರೂ, ಅವರ ವಸ್ತುಗಳ ಆಯ್ಕೆಯಲ್ಲಿನ ವೈವಿಧ್ಯತೆ ಗಮನಿಸಿದರೆ ಅವರು ಬರಿಯ 'ಜನಪ್ರಿಯ' ಎಂಬ ವರ್ಗಕ್ಕೆ ಒಳಪಡುವ ಸರಳ ವಸ್ತು ವಿಷಯಗಳನ್ನು ಅಥವಾ ಮನೋರಂಜನೆ ನೀಡುವ ವಿಷಯಗಳನ್ನು ಮಾತ್ರವೇ ಆಯ್ಕೆಮಾಡಿಕೊಂಡು ಬರೆದಿಲ್ಲ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಸಾಮಾಜಿಕ ಕಳಕಳಿಯುಳ್ಳ ಅನೇಕ ಕಾದಂಬರಿಗಳನ್ನು ಅವರು ಬರೆದಿದ್ದಾರೆ. ಅವರು ಬರೆದ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ 'ಬಿನ್ನಹಕೆ ಬಾಯಿಲ್ಲ', 'ಹೊಂಬಿಸಿಲು', 'ಹ್ಯಾಪಿ ಬರ್ತ್ಡೇ' ಮತ್ತು 'ಅಂಗೈಯಲ್ಲಿ ಅರಮನೆ' ಎಂಬ ನಾಲ್ಕು ಕಾದಂಬರಿಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ.

## KEYWORDS:

ಮಹಿಳಾ ಸಾಹಿತ್ಯ, ಕಥಾವಸ್ತು, ವೈದ್ಯ ವಿಜ್ಞಾನ.

ಉಷಾ ನವರತ್ನರಾಮ್ ಕನ್ನಡ ಜನತೆಗೆ ಪರಿಚಯವಿರುವ ಪ್ರಸಿದ್ಧ ಬರಹಗಾರ್ತಿಯರಲ್ಲಿ ಒಬ್ಬರು. ಅವರು ಪ್ರೀತಿ–ಪ್ರೇಮ, ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಗಳು, ಸೈನಿಕರ ಜೀವನ, ಸಾಮಾಜಿಕ ಸಮಸ್ಯೆಗಳು, ವಿಧವಾ ಪುನರ್ವಿವಾಹ ಮುಂತಾದ ಅನೇಕ ಸಂಗತಿಗಳನ್ನು ವಸ್ತುವಾಗಿಟ್ಟುಕೊಂಡು ಕಾದಂಬರಿಗಳನ್ನು ಬರೆದಿದ್ದಾರೆ. ವೈದ್ಯಲೋಕದ ವಿಸ್ಮಯಕಾರಿ ಸಂಗತಿಗಳನ್ನು ಓದುಗರು ಅವರ ಸಾಹಿತ್ಯದಲ್ಲಿ ಗಮನಿಸಲು ಸಾಧ್ಯವಿದೆ.

**ಬಿನ್ನಹಕೆ ಬಾಯಿಲ್ಲ**

ಈಗೀಗ 'ಮಿಮಿ', 'ಯಶೋದಾ' ಮುಂತಾದ ಚಲನಚಿತ್ರಗಳ ಮೂಲಕ, ಪ್ರಸಿದ್ಧ ವ್ಯಕ್ತಿಗಳ ಜೀವನಕ್ರಮದ ಮೂಲಕ ಪರಿಚಯವಾಗಿರುವ ಸರೋಗಸಿ ಅಥವಾ ಬಾಡಿಗೆ ತಾಯ್ತನದ ಕುರಿತು ಉಷಾ ಅವರು 1994ರಲ್ಲೇ 'ಬಿನ್ನಹಕೆ ಬಾಯಿಲ್ಲ' ಎಂಬ ಕಾದಂಬರಿ ಬರೆದಿದ್ದರು. ಅದರ ನಾಯಕಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಪ್ರತಿಭಾವಂತ ವಿದ್ಯಾರ್ಥಿನಿ. ಆದರೆ ಸರಸ್ವತಿ–ಲಕ್ಷ್ಮಿಯರು ಪರಸ್ಪರ ಒಟ್ಟಿಗೇ ಇರುವುದಿಲ್ಲ ಎಂಬಂತೆ ಕೌಟುಂಬಿಕವಾಗಿ ಅನೇಕ ಬಗೆಯ ಆರ್ಥಿಕ ಸಂಕಷ್ಟಗಳನ್ನು ಅನುಭವಿಸುತ್ತಿದ್ದ ಅವಳು, ಆರೋಗ್ಯವಂತಳಾಗಿದ್ದ ಕಾರಣ ಶ್ರೀಮಂತ ದಂಪತಿಗೆ ಮಗುವನ್ನು ಹೆತ್ತುಕೊಡಲು ಪರಿಸ್ಥಿತಿಯ ಒತ್ತಡಕ್ಕೆ ಒಳಗಾಗಿ, ಸ್ವಯಂಪ್ರೇರಿತಳಾಗಿ ಸಿದ್ಧಳಾಗುತ್ತಾಳೆ. ಅವಳ ಪ್ರೊಫೆಸರ್ ಮತ್ತು ಅವಳನ್ನು ಸರೋಗಸಿಗೆ ಒಳಪಡಿಸಿದ ವೈದ್ಯೆಯನ್ನು ಬಿಟ್ಟು ಉಳಿದವರಿಗೆ ಈ ಸಂಗತಿ ತಿಳಿದಿರುವುದಿಲ್ಲ. ಸ್ವಂತ ಅಣ್ಣನಿಂದ ಸಾಮಾಜಿಕವಾಗಿ ಅವಮಾನಕ್ಕೊಳಗಾಗುವ ಆಕೆಯ ಬೆಂಬಲಕ್ಕೆ ನಿಲ್ಲುವವರು ಆಕೆಯ ಪ್ರೊಫೆಸರ್, ವೈದ್ಯೆ ಮತ್ತು ಅವಳ ಪ್ರೇಮಿಯಾದ ವೈದ್ಯ ಸರ್ವಜಿತ್. ಗರ್ಭಿಣಿ ಆಗಿರುವ ಅವಳ ಶಿಕ್ಷಣವನ್ನು ಮುಗಿಸಲು, ಶಿಕ್ಷಣದ ಭಾಗವಾದ ಪ್ರಯೋಗಗಳನ್ನು ಮಾಡಲು ಅವಳ ಸಹಪಾಠಿಗಳು ಮತ್ತು ಉಳಿದವರು ನೆರವಾಗುತ್ತಾರೆ.

ಈ ಕಾದಂಬರಿಯಲ್ಲಿ ಬಾಡಿಗೆ ತಾಯ್ತನವನ್ನು ಜೀವವಿಜ್ಞಾನ, ಮನೋವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಗಳೆಂಬ ಮೂರು ವಿಭಿನ್ನ ಆಯಾಮಗಳಲ್ಲಿ ಚಿತ್ರಿಸಲಾಗಿದೆ. ಸ್ತ್ರೀ–ಪುರುಷರ ಅಂಡಾಣು ಮತ್ತು ವೀರ್ಯಗಳನ್ನು ಒಟ್ಟುಗೂಡಿಸಿ, ತರುವಾಯ ಬೆಳೆಯಲಾರಂಭಿಸಿದ ಭ್ರೂಣವನ್ನು ಬಾಡಿಗೆ ತಾಯಿಯಾಗುವವಳ ಗರ್ಭಕೋಶಕ್ಕೆ ಸೇರಿಸುವ ಪ್ರಕ್ರಿಯೆ, ಅವಳು ಮಗು ಹೆರುವವರೆಗೆ ಬೇಕಾದ ಎಲ್ಲ ರೀತಿಯ ಚಿಕಿತ್ಸೆಗಳನ್ನು ನೀಡಿ ಕಾಳಜಿ ವಹಿಸುವುದು, ಮುಖ್ಯವಾಗಿ ಮಗು ಹೆರುವ ಹೊತ್ತಿಗೆ ತಾಯಿಯಾಗುವವಳಿಗೆ ಯಾವುದೇ ರೀತಿಯ ದೈಹಿಕ–ಮಾನಸಿಕವಾದ ಗಂಭೀರ ಸಮಸ್ಯೆಗಳು ಇಲ್ಲದಂತೆ ನೋಡಿಕೊಳ್ಳುವುದು ಬಹಳ ಮುಖ್ಯ ಎಂಬುದನ್ನು ಈ ಕಾದಂಬರಿ ತಿಳಿಸುತ್ತದೆ.

ಮುಖ್ಯವಾಗಿ, ಮದುವೆಯಾಗಿ ಕುಟುಂಬ ಅಥವಾ ವಂಶ ಬೆಳೆಸಲೆಂದು ತನ್ನ ಮತ್ತು ಗಂಡನ ವಂಶವಾಹಿಗಳನ್ನು ಹೊತ್ತ ಮಗುವಿನ ತಾಯಿಯಾಗುವವಳಿಗೂ, ಬೇರೆ ದಂಪತಿಯ ವಂಶವಾಹಿಗಳನ್ನು ಹೊತ್ತ ಮಗುವಿಗೆ ತಾಯಿಯಾಗಲು ಹೊರಟ

ಅವಿವಾಹಿತೆಗೂ ಇರುವ ವ್ಯತ್ಯಾಸವನ್ನು ಈ ಕಾದಂಬರಿಯಲ್ಲಿ ನಾವು ಗಮನಿಸುತ್ತೇವೆ. ತಮ್ಮ ಕುಟುಂಬದ ವಾರಸಾದ ಮಗುವನ್ನು ಹೊತ್ತ ಹೆಣ್ಣನ್ನು ಕುಟುಂಬದ ಸದಸ್ಯರೆಲ್ಲರೂ ಪ್ರೀತಿ–ಕಾಳಜಿಯಿಂದಲೇ ನೋಡಿಕೊಂಡು, ಅವಳ ಬೇಕು–ಬೇಡಗಳನ್ನು ಅನುಕ್ಷಣವೂ ಗಮನಿಸುತ್ತಿರುತ್ತಾರೆ. ಆದರೆ, ತನ್ನ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸ್ವಯಂಪ್ರೇರಿತ ಬಾಡಿಗೆ ತಾಯ್ತನವನ್ನು ಒಪ್ಪಿಕೊಂಡ ಕಥಾನಾಯಕಿ ಸ್ವಾತಿಯನ್ನು ಅವಳ ತಾಯಿ ಅಥವಾ ಅಣ್ಣನ ಮನೆಯವರು ಸರಿಯಾಗಿ ನೋಡಿಕೊಳ್ಳುವುದಿಲ್ಲ. ಜೊತೆಗೇ ಅವಳ ಮೇಲೆ ಇಲ್ಲಸಲ್ಲದ ನಿಂದೆಗಳನ್ನು ಹಾಕಿ, ಅವಳನ್ನು ಇನ್ನಷ್ಟು ನೋಯಿಸುತ್ತಾರೆ. ವೈದ್ಯಕೀಯ ವಿದ್ಯಾರ್ಥಿನಿಯಾಗಿ ತಾಯ್ತನದ ಕುರಿತು ಸೈದ್ಧಾಂತಿಕವಾಗಿ ಪಾಠ ಕಲಿತ ಆಕೆ, ಈ ಬಾಡಿಗೆ ತಾಯ್ತನದ ಮೂಲಕ ಅದನ್ನೇ ಪ್ರಾಯೋಗಿಕವಾಗಿ ಅನುಭವಿಸುವಂತಾಗುತ್ತದೆ.

**ಜೀವ ಉಳಿಸುವ ಬಿಳಿರಕ್ತ ಕಣಗಳೇ ಶತ್ರುವಾಗುವ ಕತೆ**

ಉಷಾ ಅವರ ಇನ್ನೊಂದು ಕಾದಂಬರಿ 'ಹ್ಯಾಪಿ ಬರ್ತ್ಡೇ'. 1985ರಲ್ಲಿ ಮೂರನೇ ಮುದ್ರಣ ಕಂಡ ಈ ಕಾದಂಬರಿ 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಣೆಗೊಂಡು ಜನಮೆಚ್ಚುಗೆ ಪಡೆದಿದೆ. ಇದರಲ್ಲಿ ಪುಟ್ಟ ಹುಡುಗಿಯೊಬ್ಬಳಿಗೆ ಬ್ಲಡ್ ಕ್ಯಾನ್ಸರ್ ಬರುವ ವಸ್ತುವಿದೆ. ಹಾಗೆಯೇ ವಿಧವಾ ಪುನರ್ವಿವಾಹವನ್ನೂ ಈ ಕಾದಂಬರಿ ಸಮರ್ಥಿಸುತ್ತದೆ. ಸುಮಾ ಶಾಲೆಗೆ ಹೋಗುವ ಹುಡುಗಿ. ಅವಳ ಮಾವ ಸುಧಾಕರ ವೈದ್ಯ. ಸುಮಾಳ ಟೀಚರ್ ಉಮಾಳನ್ನು ಆತ ಇಷ್ಟಪಡುತ್ತಾನೆ. ಅವಳು ವಿಧವೆ ಎಂದು ತಿಳಿದರೂ ಸುಧಾಕರ ತನ್ನ ನಿರ್ಧಾರ ಬದಲಿಸದೇ ಆಕೆಯ ಮೇಲಿನ ಪ್ರೇಮವನ್ನು ಹಾಗೆಯೇ ಉಳಿಸಿಕೊಳ್ಳುತ್ತಾನೆ.

ಇಲ್ಲಿ ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯವಾಗಿ ನಾವು ಗಮನಿಸುವುದು ಲ್ಯುಕೇಮಿಯ ಅಥವಾ ಬ್ಲಡ್ ಕ್ಯಾನ್ಸರ್ ಎಂಬ ರೋಗದ ಬಗೆಗೆ. ಶಾಲಾ ವಿದ್ಯಾರ್ಥಿನಿ ಸುಮಾ ಚಟುವಟಿಕೆಯಿಂದ ಓಡಾಡುತ್ತಿದ್ದವಳು ಇದ್ದಕ್ಕಿದ್ದಂತೆ ಸುಸ್ತಾಗುತ್ತಾಳೆ. ಅವಳ ಮಾವ ಅವಳನ್ನು ಆಸ್ಪತ್ರೆಗೆ ಕರೆದೊಯ್ದು ಪರೀಕ್ಷಿಸಿದಾಗ ಅವಳಿಗೆ ಬ್ಲಡ್ ಕ್ಯಾನ್ಸರ್ ಇರುವುದು ತಿಳಿಯುತ್ತದೆ. ರಕ್ತದಲ್ಲಿರುವ ಬಿಳಿರಕ್ತ ಕಣಗಳು ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ. ಆದರೆ ಅದೇ ಬಿಳಿ ರಕ್ತಕಣಗಳ ಸಂಖ್ಯೆ ಹೆಚ್ಚಾದರೆ, ಅವುಗಳು ದೇಹಕ್ಕೆ ಹಾನಿ ಮಾಡಿ ಸಾವನ್ನು ತರಬಲ್ಲವು. ಬಿಳಿ ರಕ್ತಕಣಗಳ ಸಂಖ್ಯೆ ದಿನದಿನಕ್ಕೂ ದ್ವಿಗುಣವಾಗುವ ರೋಗವನ್ನೇ ಬ್ಲಡ್ ಕ್ಯಾನ್ಸರ್ ಅಥವಾ ಲ್ಯುಕೇಮಿಯಾ ಎನ್ನುತ್ತಾರೆ. ಅಂತಹ ಕಾಯಿಲೆಗೆ ಒಳಗಾದ ಸುಮಾಳನ್ನು ಅವಳ ಸುತ್ತಲಿನವರು ಪ್ರೀತಿ–ಕಾಳಜಿಗಳಿಂದ ನೋಡಿಕೊಳ್ಳುವ ಮೂಲಕ ಅವಳ ಕೊನೆಯ ದಿನಗಳನ್ನು ನೆಮ್ಮದಿಯಿಂದ ಕಳೆಯುವಂತೆ ಮಾಡುತ್ತಾರೆ. ಸುಮಾಳ ಆಸೆಯಂತೆ ಅವಳ ಉಮಾ ಟೀಚರನ್ನು ಮಾವ ಸುಧಾಕರ ಮದುವೆಯಾಗುತ್ತಾನೆ.

**ಸೇವೆಯೇ ವೈದ್ಯರ ಕೆಲಸವಾಗಿರಬೇಕು ಎಂದು ತಿಳಿಸುವ ಕಾದಂಬರಿ**

1990ರಲ್ಲಿ ಪ್ರಕಟವಾದ 'ಹೊಂಬಿಸಿಲು' ಕಾದಂಬರಿಯು ಬೆಂಗಳೂರು ನಗರದ ಜನಪ್ರಿಯ ವಾರಪತ್ರಿಕೆ 'ಸಿಟಿಟ್ಯಾಬ್'ನಲ್ಲಿ ಉಷಾ ನವರತ್ನರಾಮ್ ಅವರಿಂದಲೇ ಆಂಗ್ಲ ಭಾಷೆಗೆ ಅನುವಾದಿಸಲ್ಪಟ್ಟು ಪ್ರಕಟಗೊಂಡಿತ್ತು. ಈ ಕಾದಂಬರಿಯು ಚಲನಚಿತ್ರವಾಗಿಯೂ ಜನಮನ್ನಣೆ ಗಳಿಸಿತು.

ಈ ಕಾದಂಬರಿಯಲ್ಲಿ ಒಬ್ಬಾಕೆ ಹಿರಿಯ ವೈದ್ಯೆ ಕಮಲಮ್ಮ. ಆಕೆಯ ಸಂಬಂಧಿಕರ ಆಸ್ಪತ್ರೆಯಲ್ಲಿ ಮುಖ್ಯಸ್ಥನಾದ ಯುವ ವೈದ್ಯನಿಗೆ ಸಹಾಯಕಳಾಗಿ ತನ್ನದೇ ಶಿಷ್ಯೆಯೊಬ್ಬಳನ್ನು ನೇಮಿಸುತ್ತಾರೆ. ಅದರೊಂದಿಗೆ ಇನ್ನೊಬ್ಬಾಕೆ ಕೇವಲ ಪ್ರತಿಷ್ಠೆಗಾಗಿ ಎಂ.ಬಿ.ಬಿ.ಎಸ್. ಕಲಿತ ವೈದ್ಯೆಯೂ ಬರುತ್ತಾಳೆ. ಕಾದಂಬರಿಯು ಈ ಇಬ್ಬರು ವೈದ್ಯೆಯರ ನಡುವಿನ ರೂಪ, ವ್ಯಕ್ತಿತ್ವಗಳ ವ್ಯತ್ಯಾಸಗಳನ್ನು ಮೂರನೆಯವರ ಮಾತುಗಳ ಮೂಲಕ ತಿಳಿಸುತ್ತಲೇ, ಉತ್ತಮ ವೈದ್ಯರಾಗಬಯಸುವವರು ಸರಳವಾಗಿದ್ದು ಉತ್ತಮ ಸೇವಾ ಮನೋಭಾವ ಹೊಂದಿರಬೇಕು; ಯಾವ ಹೊತ್ತಿಗಾದರೂ ವೈದ್ಯಕೀಯ ಸೇವೆ ನೀಡಲು ಸಿದ್ಧವಾಗಿರಬೇಕು; ಯಾವ್ಯಾವ ರೋಗಕ್ಕೆ ಯಾವ್ಯಾವ ಚಿಕಿತ್ಸೆ ನೀಡಬೇಕು, ಎಲ್ಲಕ್ಕಿಂತ ಮುಖ್ಯವಾಗಿ ರೋಗಿ ಹೇಳಿದ್ದರೊಂದಿಗೆ ಅವನನ್ನು ಪರೀಕ್ಷೆ ಮಾಡಿ, ಅವನ ಸ್ಥಿತಿಗತಿಯನ್ನು ತಿಳಿದು ನಂತರವೇ ರೋಗಿಗೆ ಚಿಕಿತ್ಸೆ ನೀಡಬೇಕು ಎಂಬುದನ್ನು ತಿಳಿಸುತ್ತದೆ.

ಆಸ್ಪತ್ರೆಯ ಸ್ಥಾಪಕ ವೈದ್ಯ ನಟರಾಜ ತನ್ನ ಗೆಳೆಯ ಡಾ. ಶ್ರೀನಾಥನ ಸಂಬಂಧಿಯಾದ ಡಾ. ವಾಸಂತಿ ಎಂಬಾಕೆಯನ್ನು ತನ್ನ ಆಸ್ಪತ್ರೆಯಲ್ಲಿ ತನ್ನ ಪತ್ನಿ ಡಾ. ರೂಪಳ ಸಹಾಯಕ ವೈದ್ಯೆಯಾಗಿ ನೇಮಿಸಿರುತ್ತಾನೆ. ಡಾ. ವಾಸಂತಿ ಮತ್ತು ಡಾ. ರೂಪಾ ಇಬ್ಬರೂ ರೋಗಿಗಳನ್ನು ಪರೀಕ್ಷೆ ಮಾಡುವ ರೀತಿಯನ್ನು ಆಸ್ಪತ್ರೆ ಸಿಬ್ಬಂದಿಗಳು ಮತ್ತು ರೋಗಿಗಳ ದೃಷ್ಟಿಯಲ್ಲಿ ವಿವರಿಸುವ ಕಾದಂಬರಿ, "ಡಾ. ವಾಸಂತಿ ನಾನು ಬರಿಯ ಮೈ ಕಾಯಿಲೆ ವಾಸಿ ಮಾಡುವುದರಲ್ಲಿ ನಂಬುವುದಿಲ್ಲ. ಮನಸ್ಸಿನದೇ ಅರ್ಧ ಕಾಯಿಲೆ ಇರುತ್ತೆ. ಅದನ್ನು ವಾಸಿಮಾಡಿ ಅನಂತರ ಮೈಯಿನ ಕಾಯಿಲೆ ನೋಡುವುದು, ಐ ಬಿಲೀವ್ ಇನ್ ಕ್ಯೂರಿಂಗ್ ದಿ ಮೈಂಡ್ ಅಲಾಂಗ್ ವಿತ್ ದಿ ಬಾಡಿ" (ಉಷಾ ನವರತ್ನರಾಮ್, 2014(2), ಪು. 97) ಎಂಬ ಮಾತುಗಳ ಮೂಲಕ ಡಾ. ರೂಪಾಳ ದೃಷ್ಟಿಯಲ್ಲಿ ವೈದ್ಯರು ನೀಡಬೇಕಾದ ಚಿಕಿತ್ಸೆ ಹೇಗಿರಬೇಕು ಎಂಬುದನ್ನೂ ತಿಳಿಸುತ್ತದೆ.

**ಸತ್ಯಘಟನೆ ಆಧಾರಿತ ಕಾಲ್ಪನಿಕ ಕಾದಂಬರಿ**

1993ರಲ್ಲಿ ಮೊದಲ ಮುದ್ರಣವಾದ 'ಅಂಗೈಯಲ್ಲಿ ಅರಮನೆ' ಕಾದಂಬರಿಯು ಸತ್ಯಘಟನೆಯ ಆಧಾರಿತವಾಗಿದೆ. 'ಹಂಸರಾಗ' ನಿಯತಕಾಲಿಕೆಯಲ್ಲಿ ಧಾರಾವಾಹಿಯಾಗಿ ಮೂಡಿಬಂದು, ಜನಮನ್ನಣೆ ಗಳಿಸಿರುವ ಈ ಕಾದಂಬರಿಯು 'ಹಸಿರು ತೋರಣ' ಎಂಬ ಎಸ್ಟೇಟ್ ಒಂದರಲ್ಲಿ ನಡೆಯುವ ಘಟನೆಗಳ ಸುತ್ತ ಬರೆಯಲ್ಪಟ್ಟಿದೆ. ಆ ಎಸ್ಟೇಟ್‌ನ ಉದ್ಯೋಗಿಗಳಿಗಾಗಿ ನಿರ್ಮಿಸಲಾದ ಆಸ್ಪತ್ರೆಗೆ ಅಗತ್ಯವಿರುವ ವೈದ್ಯರಿಗಾಗಿ ಸಂದರ್ಶನ ನಡೆದು, ಡಾ. ಅಂಕಿತಾ ಎಂಬ ಯುವ

ವೈದ್ಯೆ ಆಯ್ಕೆಯಾಗುತ್ತಾಳೆ. ಅವಳು ದಕ್ಷ-ಪ್ರಾಮಾಣಿಕಳಾಗಿ ಸೇವೆ ಸಲ್ಲಿಸುವ ರೀತಿ, ಅನೇಕ ಬಗೆಯ ರೋಗಿಗಳನ್ನು ನೋಡಿಕೊಳ್ಳುವ, ಅವರಿಗೆ ಚಿಕಿತ್ಸೆ ನೀಡುವ ರೀತಿ ಇವುಗಳನ್ನು ಹೇಳುತ್ತಲೇ, ಕೊನೆಗೆ ಬುದ್ಧಿಮಾಂದ್ಯ ಹೆಣ್ಣೊಬ್ಬಳು ಆ ಎಸ್ಟೇಟ್ ಮಾಲೀಕರ ಮಗನಿಂದ ಅವನು ಮತ್ತಿನಲ್ಲಿ ಇದ್ದಾಗ ಅತ್ಯಾಚಾರಕ್ಕೆ ಒಳಗಾಗಿ, ಗರ್ಭಿಣಿಯಾದಾಗ ಕೋಪಗೊಂಡ ಅಂಕಿತಾ, ಏನೂ ಗೊತ್ತಿಲ್ಲದ ಆ ಯುವತಿಯ ಹೆರಿಗೆ ಮಾಡಿಸಲು ಬಹಳ ಕಷ್ಟಪಡುತ್ತಾಳೆ. ಹೆರಿಗೆಯಾದ ನಂತರ ಆ ಯುವತಿ ರಾಧಾಳಿಗೆ ಇದ್ದಕ್ಕಿದ್ದ ಹಾಗೆಯೇ ಅತ್ಯಾಚಾರದ ಘಟನೆ ನೆನಪಾಗಿ, ಅವಳು ಮೂರ್ಛೆ ಹೋಗಿ, ಕೊನೆಗೆ ಸಾವನ್ನಪ್ಪುತ್ತಾಳೆ. ತಾನೊಬ್ಬ ವೈದ್ಯೆಯಾಗಿಯೂ ಅವಳನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಡಾ. ಅಂಕಿತಾಳಿಗೆ ಪಶ್ಚಾತಾಪ ತರುತ್ತದೆ.

ಕಾದಂಬರಿಯ ವಸ್ತುವಿನ ಕುರಿತು ತಿಳಿಸುತ್ತಾ ಲೇಖಕಿ ಉಷಾ ನವರತ್ನರಾಮ್ ಅವರು "ವಿದ್ಯಾವಂತ ಹೆಣ್ಣು ತನ್ನದೇ ಆದ ಒಂದು ಅರಮನೆ ಕಟ್ಟಿಕೊಳ್ಳಲು ಯತ್ನಿಸಿ, ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಯತ್ನಿಸುವಾಗ ಅವಳೆದುರಿಸುವ ಸಮಸ್ಯೆಗಳು ಒಂದಲ್ಲಾ ಒಂದಿರುತ್ತದೆ. ಆರ್ಥಿಕ ಸ್ವಾತಂತ್ರ್ಯ ಸಿಕ್ಕರೊಂದೇ ಸಾಲದು, ಅವಳಿಗೆ ಅತ್ಯಗತ್ಯವಾದ ಮನ್ನಣೆ, ಗೌರವ, ಸೌಕರ್ಯ, ಸಂತೃಪ್ತಿ ಮುಖ್ಯ. ಈ ತೊಡಕಿನ ಹಾದಿಯಲ್ಲಿ ಪ್ರತಿಯೊಂದು ಹೆಜ್ಜೆಯೂ ದುರ್ಭರವಾದರೆ ಅವಳ ಸಹನೆಗೂ ಒಂದು ಮಿತಿಯಿರುತ್ತದೆ. ಇಂತಹ ಒಂದು ಹೆಣ್ಣಿನ ಸತ್ಯಕಥೆಯನ್ನು ಓದುಗರ ಮುಂದಿಡಲಾಗಿದೆ. ಘಟನೆ ಸತ್ಯವಾದರೂ ಸ್ಥಳ, ವ್ಯಕ್ತಿಗಳ ಹೆಸರು ಬದಲಾಗಿದ್ದು ಸತ್ಯದ ಸುತ್ತ ಕಾಲ್ಪನಿಕ ಕತೆಯ ಹಂದರ ಹೆಣೆಯಲಾಗಿದೆ," ಎಂದಿದ್ದಾರೆ. (ಉಷಾ ನವರತ್ನರಾಮ್, 1993, ಮುನ್ನುಡಿ). ಆಸ್ಪತ್ರೆಯ ಬದುಕು, ಅಲ್ಲಿಗೆ ಚಿಕಿತ್ಸೆಗಾಗಿ ಬರುವ ಜನರ ಗುಣ ಸ್ವಭಾವಗಳು, ವೈದ್ಯರು ಚಿಕಿತ್ಸೆ ಮಾಡುವಾಗ ವಹಿಸಬೇಕಾದ ಎಚ್ಚರಿಕೆ ಇತ್ಯಾದಿಗಳನ್ನು ಈ ಕಾದಂಬರಿ ತಿಳಿಸುತ್ತದೆ.

## ಕೊನೆ ಮಾತು

ಆಸ್ಪತ್ರೆಗಳ ಕುರಿತು, ವೈದ್ಯಕೀಯ ಚಿಕಿತ್ಸೆಗಳ ಕುರಿತು ಬಂದಿರುವ ಕಾದಂಬರಿಗಳ ಸಂಖ್ಯೆ ವಿರಳವಾಗಿರುವುದನ್ನು ನಾವು ಗಮನಿಸಬಹುದು. ಯಾವುದೇ ಆಧುನಿಕ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಗಳಿಲ್ಲದಿದ್ದ ಕಾಲದಲ್ಲಿಯೇ ವೈದ್ಯ ವಿಜ್ಞಾನವನ್ನು ಇಷ್ಟು ಚೆನ್ನಾಗಿ ಜನಸಾಮಾನ್ಯರಿಗೂ ಅರ್ಥವಾಗುವಂತೆ ಬರೆಯಬಲ್ಲ ಸಾಹಿತಿಗಳು ನಮ್ಮ ನಡುವೆ ಇದ್ದರು ಎಂಬುದನ್ನು ಈ ಕಾದಂಬರಿಗಳ ಓದಿನ ಮೂಲಕ ನಾವು ತಿಳಿಯಬಹುದು. ಬಾಡಿಗೆ ತಾಯ್ತನ, ಮೆಡಿಕಲ್ ಕಾಲೇಜುಗಳ ಕಾರ್ಯವೈಖರಿ, ಬ್ಲಡ್ ಕ್ಯಾನ್ಸರ್, ಆಸ್ಪತ್ರೆಗಳಲ್ಲಿ ವೈದ್ಯರು ಹೇಗಿರಬೇಕು, ಅಲ್ಲಿ ಎದುರಾಗಬಹುದಾದ ವೈದ್ಯಕೀಯ, ರಾಜಕೀಯ, ಸಾಮಾಜಿಕ, ಆರ್ಥಿಕ ತೊಂದರೆಗಳೇನು, ವೈದ್ಯರಾದವರು ಇವುಗಳನ್ನು ಹೇಗೆ ಎದುರಿಸಬೇಕು ಇತ್ಯಾದಿ ವಿಚಾರಗಳ ಕುರಿತು ಉಷಾ ನವರತ್ನರಾಮ್ ಅವರು ಜನರ ಮನಮುಟ್ಟುವಂತೆ ತಿಳಿಸಿದ್ದಾರೆ.

## ಪರಾಮರ್ಶನ ಗ್ರಂಥಗಳು:


1. ಉಷಾ ನವರತ್ನರಾಮ್, (1985), ಹ್ಯಾಪಿ ಬರ್ಥ್ ಡೇ, ಬೆಂಗಳೂರು: ವರ್ಧಮಾನ ಪ್ರಕಾಶನ.
2. ಉಷಾ ನವರತ್ನರಾಮ್, (2014), ಹೊಂಬಿಸಿಲು, ಬೆಂಗಳೂರು: ಇಂದಿರಾ ಪ್ರಕಾಶನ.
3. ಉಷಾ ನವರತ್ನರಾಮ್, (1993), ಅಂಗೈಯಲ್ಲಿ ಅರಮನೆ, ಬೆಂಗಳೂರು: ಶ್ರೀಲಕ್ಷ್ಮೀ ಪ್ರಕಾಶನ.
4. ಉಷಾ ನವರತ್ನರಾಮ್, (2011), ಬಿನ್ನಹಕೆ ಬಾಯಿಲ್ಲ, ಬೆಂಗಳೂರು: ಸಾಹಿತ್ಯ ನಂದನ.